Procedure for collecting the Water Rate

ಶ್ರೀ ಕಾಗೋಡು ತಿಮ್ಮಪ್ಪ.—ನೀರಿನ ತೆರಿಗೆ ಬಗ್ಗೆ ನಾನು ಮತ್ತು ಮಾನ್ಯ ಬಂಗಾರಪ್ಪನವರು ಒಂದು ನೋಟೀಸ್ ಕೊಟ್ಟಿದ್ದೇವೆ. ಮಾನ್ಯ ಕಂದಾಯ ಸಚಿವರು ಸಹ ಇಲ್ಲಿದ್ದಾರೆ ಆದಕಾರಣ ಆ ಬಗ್ಗೆ ಸ್ವಲ್ಪದರಲ್ಲಿ ಹೇಳುತ್ತೇನೆ. ನೀರಿನ ತೆರಿಗೆ ಹಾಕಿದಮೇಲೆ ಆ ಬಗ್ಗೆ ಅಪೀಲ್ ಹೋಗಲು ಕಾನೂನಿನಲ್ಲಿ ಅವಕಾಶವಿದೆ. ಆದರೆ ನಮ್ಮ ಸಬ್-ಡಿವಿಜನ್‌ನಲ್ಲಿ ಏನಾಗಿದೆ ಎಂದರೆ, ಈ ಬಗ್ಗೆ ಅಸಿಸ್ಟೆಂಟ್ ಕಮೀಷನರ್ ಅವರಿಗೆ ಅಪೀಲ್ ಹಾಕಿಕೊಂಡಮೇಲೆ ಅದನ್ನು ಯಾವ ದಿವಸ ವಿಚಾರಣೆ ಮಾಡಲಾಗುತ್ತದೆಂಬ ಬಗ್ಗೆ ಸಂಬಂಧಪಟ್ಟ ವಕೀಲರಿಗೇ ತಾರೀಖು ಕೊಡುವುದಿಲ್ಲ ಮತ್ತು ಸ್ಪಾಟ್ ಇನ್ಸ್‌ಪೆಕ್ಷನ್‌ಗೆ ಯಾವಾಗ ಹೋಗುತ್ತಾರೆಂಬುದನ್ನು ತಿಳಿಸುವುದಿಲ್ಲ ನಾನು ನೋಡಿದರೆ ನೋಡಬಹುದು, ಬಿಟ್ಟರೆ ಬಿಡಬಹುದು ಎಂದು ಅವರು ಹೇಳುತ್ತಿದ್ದಾರೆ. ಕಾನೂನು ಪ್ರಕಾರ ನಡೆದುಕೊಳ್ಳಲಿ ತಮ್ಮಗಿಷ್ಟ ಬಂದಂತೆ ಅವರು ನಡೆದುಕೊಳ್ಳುತ್ತಿದ್ದಾರೆ. ಈ ರೀತಿಯಾದರೆ ನಾವು ಕಾನೂನು ಮತ್ತು ವಿಧಿನಿಯಮಗಳನ್ನಾದರೂ ಸಹ ಏತಕ್ಕೆ ಮಾಡಬೇಕು ? ಕಾನೂನು ಮಾಡಿದಮೇಲೆ ಅದರಂತೆ ಎಲ್ಲರೂ ನಡೆದುಕೊಳ್ಳಬೇಕಾಗುತ್ತದೆ, ಇಲ್ಲದಿದ್ದರೆ ರೈತರಿಗೆ ತೊಂದರೆಯಾಗುತ್ತದೆ, ಅವರೇನಾದರು ಅಪೀಲ್‌ಗಳನ್ನು ರಿಜೆಕ್ಟ್ ಮಾಡಿದರೆ ಸಂಬಂಧಪಟ್ಟವರೆಲ್ಲಾ ಹೈಕೋರ್ಟಿಗೆ ಬರಬೇಕಾಗುತ್ತದೆ. ಮೊನ್ನೆತಾನೆ ಮಾನ್ಯ ಚೌಡರೆಡ್ಡಿಯವರ ಒಂದು ಪ್ರಶ್ನೆಗೆ ಉತ್ತರಕೊಡುತ್ತಾ ಪಹಣಿಯ ಆಧಾರದ ಮೇಲೆ ದರ ನಿಗದಿ ಮಾಡುತ್ತೇವೆಂದು ಹೇಳಿದಿರಿ. ಇಂದು ವಿಲೇಜ್ ಅಕೌಂಟೆಂಟ್ಸ್ ಏನಿದ್ದಾರೆ, ಅವರು ಬೆಳೆಯಾಗಲಿ, ಆಗದೇ ಹೋಗಲಿ, ಎಕರೆ ಆಧಾರದ ಮೇಲೆ ಇಷ್ಟು ಬೆಳೆಯಾಗಿದೆ ಎಂದು ಬರೆದುಕೊಡುತ್ತಾರೆ ನೀರಿನ ಅನುಕೂಲ ಸರಿಯಾಗಿ ಸಿಕ್ಕಿದೆಯೇ ಇಲ್ಲವೇ ಎಂಬುದನ್ನು ಅವರು ವಿಚಾರ ಮಾಡುವುದಕ್ಕೆ ಹೋಗುವುದಿಲ್ಲ, ಅವರೂ ಸಹ ಇಂದು ಒಂದು ರೀತಿಯ ಬ್ರಹ್ಮ ಸೃಷ್ಟಿಯಾಗಿಬಿಟ್ಟಿದ್ದಾರೆ. ಅವರ ಲೆಕ್ಕವನ್ನು ಆಧಾರವನ್ನಾಗಿ ಇಟ್ಟುಕೊಳ್ಳದೆ ಕಾನೂನು ಪ್ರಕಾರ ನಡೆದುಕೊಳ್ಳಬೇಕೆಂದು ತಾವು ಅಧಿಕಾರಿಗಳಿಗೆ ಆದೇಶ ಕೊಡಬೇಕು. ಇಲ್ಲದಿದ್ದರೆ ನಾವೇ ಕಾನೂನನ್ನು ಅಗೌರವವಾಗಿ ಕಂಡಂತೆ ಆಗುತ್ತದೆ. ಅದಕ್ಕೆ ಅವಕಾಶ ಕೊಡದೆ ಕೂಡಲೇ ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವಾಟರ್ ರೇಟ್‌ಗೆ ಸಂಬಂಧಪಟ್ಟಂತೆ ಹೇಳುವುದಾದರೆ 'if the water is made available' ಎಂದು ಸ್ಪಷ್ಟವಾಗಿ ಕಾನೂನಿನಲ್ಲಿ ಹೇಳಿದೆ. ಬೆಳೆಯಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಶಾನುಭೋಗರು ಪಹಣಿಯಲ್ಲಿ ಬರೆಯುತ್ತಾರೆ. ಆದರೆ ಯಾವುದಾದರು ಅಚ್ಚುಕಟ್ಟಿನಲ್ಲಿ ಭೆಳೆಯಾಗಿಲ್ಲ ಎಂದು ತಕರಾರು ಬಂದರೆ ಅಸಿಸ್ಟೆಂಟ್ ಕಮೀಷನರ್ ಮತ್ತು ಎಕ್ಸಿಕ್ಯುಟಿವ್ ಇಂಜಿನಿಯರ್ ಅವರು ಜಾಯಿಂಟ್ ಇನ್ಸ್‌ಪೆಕ್ಷನ್‌ಮಾಡಿ ಬೆಳೆ ಆಗಿದೆ ಎಂದು ವರದಿ ಕೊಟ್ಟರೆ. ನೀರಿನ ತೆರಿಗೆ ವಜಾ ಮಾಡುವುದಕ್ಕೆ ಅವಕಾಶವಿದೆ. ಇಲ್ಲಿ ಪಹಣಿ ಆಧಾರದಮೇಲೆ ವಾಟರ್ ರೇಟ್ ಹಾಕುವುದಿಲ್ಲ, ನೀರನ್ನು ಯಾವ ಯಾವ ಭಾಗಗಳಿಗೆ ಒದಗಿಸಲಾಗುತ್ತದೋ ಅಂತಹ ಭಾಗಗಳಿಗೆ ಮಾತ್ರ ವಾಟರ್ ರೇಟ್‌ನ್ನು ವಿಧಿಸಲಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ವಾಟರ್ ರೇಟ್ ಕೊಡಬೇಕೆಂದು ಡಿವ್ಯಾಂಡ್ ನೋಟೀಸ್ ಕೊಟ್ಟರೆ ಅದರ ಬಗ್ಗೆ ಅಪೀಲ್ ಹೋಗುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆ. ಅದರಂತೆ ೩-೪ ಸಾವಿರ ಜನರು ಅಪೀಲ್ ಹಾಕಿಕೊಂಡಿದ್ದಾರೆ. ಆದರೆ ಕಳೆದ ೪-೫ ವರ್ಷಗಳಿಂದ ಅವುಗಳನ್ನು ವಿಚಾರಣೆಮಾಡಿಲ್ಲ, ವಿಚಾರಣೆ ಮಾಡುವುದಕ್ಕೆ ಮೊದಲು ಸ್ಪಾಟ್ ಇನ್ಸ್‌ಪೆಕ್ಷನ್ ಮಾಡಬೇಕೆಂದು ನಿಯಮವಿದೆ. ಆದರೆ ಅಧಿಕಾರಿಗಳು ಬೇಕಾದರೆ ಮಾಡುತ್ತೇವೆ, ಇಲ್ಲದಿದ್ದರೆ ಇಲ್ಲ ಎಂದು ಹೇಳುತ್ತಾರೆ, ಮತ್ತು ಯಾವ ದಿನಸ ಸ್ಪಾಟ್ ಇನ್ಸ್‌ಪೆಕ್ಷನ್ ಮಾಡುತ್ತಾರೆ ಎಂಬುದನ್ನು ಸಹ ತಿಳಿಸುವುದಿಲ್ಲ, ರೈತರ ಪರವಾಗಿ ವಕೀಲರು ಹಾಜರಾಗುವುದಕ್ಕೆ ಅವಕಾಶಮಾಡಿ ಕೊಡುತ್ತಿಲ್ಲ, ಈ ಬಗ್ಗೆ ರೆಪ್ರೆಸೆಂಟೇಷನ್ ಕೊಟ್ಟರೆ ಅದನ್ನು ಅವರು ಉಡಾಫೆ ಮಾಡುತ್ತಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಯಾವ ಅಚ್ಚುಕಟ್ಟಿಗೆ ಸಂಬಂಧಪಟ್ಟಂತೆ ಆ ರೀತಿಯಾಗಿದೆ ಎಂದು ತಿಳಿಸಿದರೆ ವಿಚಾರಮಾಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ.—ಸಾಗರ ಸಬ್-ಡಿವಿಜನೆಗೆ ಸಂಬಂಧಪಟ್ಟಂತೆ ಆ ರೀತಿಯಾಗಿದೆ.

ಶ್ರೀ ಎನ್ ಹುಚ್ಚಮಾಸ್ತಿಗೌಡ. - ಪೂರಾ ಸಬ್-ಡಿವಿಜನ್‌ನಲ್ಲಿ ಬೆಳೆಯಾಗಿಲ್ಲ ಎಂದರೆ ಹೇಗೆ ? ಅಂತಹ ವರದಿ ನನಗೆ ಇಲ್ಲಿಯವರೆಗೆ ಬಂದಿಲ್ಲ. ಆದಕಾರಣ ಒಂದು ನಿರ್ದಿಷ್ಟವಾದ ಅಚ್ಚುಕಟ್ಟಿನಲ್ಲಿ ಬೆಳೆಯಾಗಿಲ್ಲ ಎಂದು ತಿಳಿಸಿದರೆ ಅದನ್ನು ವಿಚಾರಣೆ ಮಾಡಬಹುದು.

ಶ್ರೀ ಎಸ್. ಬಂಗಾರಪ್ಪ.—ಈಗ ಹೊಸನಗರ, ಸಿಕಾರಿಪುರ, ಸಾಗರ ಮತ್ತು ಸೊರಬ ಈ ನಾಲ್ಕು ಕಡೆಗಳಿಂದ ಸಾವಿರಾರು ಅರ್ಜಿಗಳು ಬಂದು ಅವು ವಿಚಾರಣೆಯಾಗದೆ ಪೆಂಡಿಂಗ್‌ನಲ್ಲಿ ಉಳಿದಿವೆ ಆ ಸಬ್-ಡಿವಿಜನ್‌ಗೆ ಸಂಬಂಧಪಟ್ಟಂತೆ ೪ ಸಾವಿರ ಅರ್ಜಿಗಳು ಇತ್ಯರ್ಥವಾಗಬೇಕಾಗಿದೆ Actually those who are aggrieved have taken up this matter before the Assistant Commissioner. ಈ ರೀತಿ ಇಷ್ಟೊಂದು ಸಂಖ್ಯೆಯಲ್ಲಿ ಅರ್ಜಿಗಳು ಪೆಂಡಿಂಗ್ ಇರುವಾಗ, ಅವುಗಳಿಗೆ ಸರಿಯಾದ ಹಿಯರಿಂಗ್ ಕೊಡಬೇಕು. ಆದರೆ that right is denied to the parties and to their advocates. ಈ ರೀತಿಯಾದರೆ ರೈತರಿಗೆ ಅನ್ಯಾಯ ಮಾಡಿದಂತೆ ಆಗುತ್ತದೆ. ಸರಿಯಾಗಿ ಕಾನೂನು ಪರಿಪಾಲನೆ ಮಾಡುವಂತೆ ತಾವು ಅಧಿಕಾರಿಗಳಿಗೆ ತಿಳಿಸಬೇಕು,

ಶ್ರೀ ಕಾಗೋಡು ತಿಮ್ಮಪ್ಪ. —ಇಲ್ಲಿ ಬೆಳೆಯಾಗಿದೆಯೋ ಇಲ್ಲವೋ ಎಂಬುದೊಂದೇ ಮುಖ್ಯವಾದ ವಿಷಯವಲ್ಲ. There are so many grounds on which the party can take up the matter in an appeal.

ಶ್ರೀ ಎನ್. ಹುಚ್ಚಮಾಸ್ತಿಗೌಡ —ವಾಟರ್ ರೇಟ್ ಹಾಕುವ ಬಗೆ ಹೇಳುವುದಾದರೆ 'if the water is made available' ಎಂದು ಕಾನೂನಿನಲ್ಲಿ ಸ್ಪಷ್ಟವಾಗಿ ಹೇಳಿದೆ. ಈ ಕಾನೂನನ್ನು ಮೊನ್ನೆ ಮಾಡಿದ್ದಲ್ಲ, ೧೯೬೨ನೇ ಇಸವಿಯಲ್ಲಿ ಮಾಡಿದ್ದು. ಆದರೆ ಈಗ ಅಪೀಲ್ ಮಾಡಲಾಗಿದೆ ಎಂದರೆ, ಅದು ನನಗೆ ಅರ್ಥವಾಗಲಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಈ ಸಂದರ್ಭದಲ್ಲಿ ಹಿಂದೆ ಕೆಲವು ವರ್ಷಗಳಿಂದ ಮಳೆ ಹೋಗಿ ಬೆಳೆ ಹಾಳಾಗಿ ಹೋಗಿದ್ದರಿಂದ ಸರ್ಕಾರದವರು ಲ್ಯಾಂಡ್ ರೆವಿನ್ಯೂ ಅನ್ನು ಮನ್ನಾ ಮಾಡಿರತಕ್ಕ ವರ್ಷಗಳಿದ್ದರೂ ಸೇರಿಸಿ ಒಟ್ಟು ೧೦ ವರ್ಷಗಳ ವಾಟರ್ ರೇಟ್ ಅನ್ನು ಅಸೆಸ್ ಮಾಡಿದ್ದಾರೆ. ಇದರ ಔಚಿತ್ಯ ಏನು ? ಕೆಲವು ಪ್ರದೇಶಗಳಲ್ಲಿ ಮಳೆ ಇಲ್ಲದೆ ಬೆಳೆ ಹೋಯಿತು. ಅಂಥಾ ಸಂದರ್ಭದಲ್ಲಿ ಸರ್ಕಾರದವರು ಭೂಕಂದಾಯವನ್ನು ರಿಮಿಷನ್ ಕೊಟ್ಟ ಮೇಲೆ ಆ ಭಾಗದಲ್ಲಿ ವಾಟರ್ ರೇಟ್ ಡಿಮ್ಯಾಂಡ್ ಹೇಗೆ ಹಾಕುತ್ತಾರೆ ಈ ಬಗ್ಗೆ ಎಲ್ಲರೂ ಅಪೀಲ್ ಹಾಕಿದರೆ ಅದರ ಬಗ್ಗೆ ಪ್ರೊಸೀಜರ್ ಫಾಲೋ ಮಾಡಿ, ಅವುಗಳನ್ನು ಡಿಸ್‌ಪೋಜ್ ಮಾಡುವುದಕ್ಕೆ ಆಗುವುದಿಲ್ಲ, ಆದ್ದರಿಂದ ಸರ್ಕಾರದವರು ಒಂದು ಜನರಲ್ ಆರ್ಡರ್ ತೆಗೆದು If such remissions are made relating to such water rate, they should not be collected ಎಂದು ಒಂದು ಜನರಲ್ ಆರ್ಡರನ್ನು ಏತಕ್ಕೆ ಮಾಡಬಾರದು ?

ಶ್ರೀ ಎನ್. ಹುಚ್ಚಮಾಸ್ತಿಗೌಡ. —ಆ ರೀತಿ ಮಾಡುವುದಕ್ಕಾಗುವುದಿಲ್ಲ ಮಿಷ್ಕಿ ಬೆಳೆ ಆಗದೇ ಇರಬಹುದು ಆದರೆ ತರಿ ಬೆಳೆ ಆಗುವುದಕ್ಕೆ ಸಾಧ್ಯ ಇದೆ ಕೆರೆಗೆ ನೀರು ಬಂದು ಅವರು ಬೆಳೆ ಮಾಡುವುದಿಲ್ಲವೇ ? ಆದ್ದರಿಂದ ಇದನ್ನು ಸಾರ್ವತ್ರಿಕವಾಗಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಡಿ, ದೇವರಾಜ ಅರಸ್.—ಸರ್ಕಾರಕ್ಕೆ ಯಾವುದರಲ್ಲಿ ದುಡ್ಡು ಬರುತ್ತದೆ ಅದನ್ನು ವಜಾ ಮಾಡಿ ಎಂದು ಹೇಳಿದರೆ ಹೇಗೆ ? ಅನೇಕ ಕಡೆ ಕೆರೆಗೆ ನೀರು ಬಾರದೆ ಇದ್ದರೂ ಬೆಳೆ ಆಗಿರುವುದು ಇದೆ. To make a statement to the effect that wherever there is no water in the tank. there is no crop at all is not correct ಆದ್ದರಿಂದ ಈ ತರಹ ಹೇಳಬಾರದು

ಶ್ರೀ ಎಸ್ ಬಂಗಾರಪ್ಪ.—೧೯೬೮-೬೯ ನೇ ಸಾಲಿನಲ್ಲಿ ಶ್ರೀಮಾನ್ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ನೀರಿನ ತೆರಿಗೆಯನ್ನು ೧೯೬೫ ರಿಂದ ಬಾಕಿಯನ್ನು ಇಟ್ಟುಕೊಳ್ಳುತ್ತಾ ಬಂದಿದ್ದರು ಅದಕ್ಕೆ ಬಡ್ಡಿ ಮತ್ತು ಚಕ್ರಬಡ್ಡಿ ಎಲ್ಲಾ ಸೇರಿಸುತ್ತಾ ಬಂದಿದ್ದಾರೆ. ಸರ್ಕಾರದವರು ಎಷ್ಟೆ ಹಣವನ್ನು ಖರ್ಚು ಮಾಡಿ ನೀರನ್ನು ಒದಗಿಸುತ್ತಾರೆ ಅಲ್ಲಿ ನೀರಿನ ತೆರಿಗೆಯನ್ನು ಹಾಕಿ ಎಷ್ಟೆ ಸರ್ಕಾರದ ಹಣವನ್ನು ಖರ್ಚು ಮಾಡಿಲ್ಲ, ನೀರನ್ನು ಒದಗಿಸಿಲ್ಲ ಅಂಥಾ ಕಡೆ ನೀರಿನ ತೆರಿಗೆಯನ್ನು ಹಾಕಬೇಡಿ ಎಂದು ನಾನು ಹೇಳಿದ್ದೇನೆ. ಕಳೆದ ಅಸೆಂಬ್ಲಿಯಲ್ಲಿ ಶ್ರೀಮಾನ್ ಹುಚ್ಚಮಾಸ್ತಿಗೌಡರು ನಮ್ಮ ಕಡೆ ಕುಳಿತುಕೊಂಡಿದ್ದರು. ಆಗ ಈ ವಾಟರ್ ರೇಟ್ ಬಗ್ಗೆ ಅವರು ನಾವು ಎಲ್ಲರೂ ಸೇರಿ ಧರಣಿ ಸತ್ಯಾಗ್ರಹವನ್ನು ಮಾಡಿದ್ದೇವೆ ಶ್ರೀಮಾನ್ ಹುಚ್ಚಮಾಸ್ತಿಗೌಡರೂ ಇದರಲ್ಲಿ ಸೇರಿದ್ದರು ಆಗ ಶ್ರೀಮಾನ್ ವೀರೇಂದ್ರ ಪಾಟೀಲರ ಸರ್ಕಾರದವರು ಏನು ಹೇಳಿದ್ದರು ಎಂದರೆ ಇವರ ಬಗ್ಗೆ ಡೆಪ್ಯುಟಿ ಕಮಿಷನರಿಗೆ ಫುಲ್ ಪವರ್ ಇದೆ ಅವರು ರಿವೈಜ್ ಮಾಡಬಹುದು ಎಂದು ಹೇಳಿಕೆಯನ್ನು ಕೊಟ್ಟಿದ್ದರು. ಈಗ ಆ ಪವರನ್ನು ಡೆಪ್ಯುಟಿ ಕಮಿಷನರು ಅಸಿಸ್ಟೆಂಟ್ ಕಮಿಷನರಿಗೆ ಡೆಲಿಗೇಟ್ ಮಾಡಿದಾಗ ಕಾನೂನು ಪ್ರಕಾರ ಅದನ್ನು ವಸೂಲು ಮಾಡುವುದಕ್ಕೆ ಕೆಲವು ಪ್ರೊಸೀಜರ್ ಅನ್ನು ಫಾಲೋ ಮಾಡಬೇಕಾಗುತ್ತದೆ. ಈಗ

ಒಂದು ಸಾರಿ ತೆರಿಗೆಯನ್ನು ಹಾಕಿದ ಮೇಲೆ ಅದನ್ನು ವಸೂಲು ಮಾಡಬೇಕಾಗುತ್ತದೆ. ಈ ಬಗ್ಗೆ ಹಿಂದೆ ಮಾನ್ಯ ರೆವಿನ್ಯೂ ಮಂತ್ರಿಗಳು ಈ ಕಡೆ ಇದ್ದಾಗ ವಿರೋಧ ಮಾತಿದ್ದಾರೆ. ಈಗ ಅವರು ಸರ್ಕಾರದ ಒಂದು ಜವಾಬ್ದಾರಿ ಸ್ಥಾನದಲ್ಲಿ ಇದ್ದಾರೆ ಆದ್ದರಿಂದ ಅವರ ಒಂದು ನೀತಿಯನ್ನು ಪ್ರಶ್ನೆ ಮಾಡಬೇಕಾಗುತ್ತದೆ. ಹಿಂದಿನ ಸರ್ಕಾರ ಇದ್ದಾಗ ಅವರು ಮುತವರ್ಜಿ ವಹಿಸಿ ಈ ತೆರಿಗೆಯನ್ನು ವಜಾ ಮಾಡುವ ಬಗ್ಗೆ ರೈತರ ಪರವಾಗಿ ಮಾತನಾಡಿದ ಮಾತನ್ನು ಉಳಿಸುವುದಕ್ಕೆ ತಾವು ಏನು ಕಾರ್ಯಕ್ರಮವನು ಹಾಕಿಕೊಂಡಿದ್ದೀರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವಾಟರ್ ರೇಟ್ ವಿಷಯಕ್ಕೆ ಇರತಕ್ಕ ಪದ ಏನು ಎಂದರೆ if the water is made available ಎಂದು. ನಿಖರವಾಗಿ ಬೆಳೆ ಆಗದಿದ್ದರೆ ವಾಟರ್ ರೇಟ್ ವಸೂಲು ಮಾಡಕೂಡದು ಎಂದು ಎಜಿಟೇಷನ್ ಆದದ್ದು ನಿಜ ಆಗ ನಾವು ಪ್ರಶ್ನೆ ಕೇಳಿದಾಗ ಆಗಿನ ರೆವಿನ್ಯೂ ಮಂತ್ರಿಗಳು ಹೇಳಿದ್ದಾರೆ. ಯಾವುದೇ ಸಂದರ್ಭ ಇರಲಿ ಅಸಿಸ್ಟೆಂಟ್ ಕಮಿಷನರಂ, ಎಗ್ಜಿಕ್ಯೂಟೀವ್ ಇಂಜಿನಿಯರು, ಜಾಯಿಂಟ್ ಆಗಿ ಇನ್‌ಸ್ಪೆಕ್ಷನ್ ಮಾಡಿ ಬೆಳೆ ಆಗಿಲ್ಲ ಎಂದು ಕಂಡುಬಂದಾಗ ವಾಟರ್ ರೇಟನ್ನು ವಜಾ ಮಾಡುತ್ತೇವೆ ಎಂದು ಹೇಳಿದ್ದಾರೆ. ಅದೇ ಆರ್ಡರ್ ಈಗಲೂ ಇದೆ ಅದೇನೂ ವ್ಯತ್ಯಾಸ ಆಗಿಲ್ಲ. ಇನ್ನೊಂದು ವಿಷಯ ಏನು ಹೇಳಿದರು ಎಂದರೆ ಸರ್ಕಾರದ ಹಣ ಖರ್ಚು ಮಾಡದೇ ಇರುವ ಕಡೆ ವಾಟರ್ ರೇಟ್ ಹಾಕಬೇಡಿ ಎಂದು ಹೇಳಿದರು. ಸರ್ಕಾರದ ಹಣ ಖರ್ಚು ಮಾಡಿ ಎಲ್ಲಿ ಕೆರೆ ಕಟ್ಟಿಸಿದ್ದಾರೆ ಅಲ್ಲಿ ವಾಟರ್ ರೇಟ್ ಹಾಕುತ್ತಾರೆ. ಸರ್ಕಾರದ ಹಣವನ್ನು ಖರ್ಚು ಮಾಡದೆ ಕೇವಲ ಮಳೆ ಆಧಾರದ ಮೇಲೆ ಬೆಳೆ ಬೆಳೆಯುತಕ್ಕದ್ದಕ್ಕೆ ವಾಟರ್ ರೇಟ್ ಹಾಕಿಲ್ಲ. ಸರ್ಕಾರದ ವರು ಹಣ ಖರ್ಚು ಮಾಡಿ ನೀರಾವರಿ ಕಾಮಗಾರಿಗಳನ್ನು ಮಾಡಿರುವ ಕಡೆ ವಾಟರ್ ರೇಟ್ ಹಾಕಿದೆ ಈಗ ವಾಟರ್ ರೇಟನಲ್ಲಿ ಮೂದಲು ಎರಡು ದರ ಇತ್ತು. ಇದರ ಮೇಲೆ ಕೆಲವರು ಹೈಕೋರ್ಟಿಗೆ ಹೋಗಿ ತಾರತಮ್ಯವಾಗುತ್ತದೆ ಎಂದು ಹೇಳಿದ ಮೇಲೆ ಒಂದೇ ದರವನ್ನು ಹಾಕಲಾಯಿತು. ಅದರ ಪ್ರಕಾರ ವಾಟರ್ ರೇಟ್ ವಸೂಲಾಗುತ್ತಿದೆ ಬೆಳೆ ಆಗಿಲ್ಲ ಎಂದು ತಕರಾರು ಬಂದಾಗ ಅಸಿಸ್ಟೆಂಟ್ ಕಮಿಷನರು ಮತ್ತು ಎಗ್ಜಿಕ್ಯೂಟೀವ್ ಇಂಜಿನಿಯರ್ ಜಾಯಿಂಟ್ ಆಗಿ ಇನ್‌ಸ್ಪೆಕ್ಷನ್ ಮಾಡಿ ಅವರು ಒಂದು ತೀರ್ಮಾನವನ್ನು ಮಾಡಿದ ಮೇಲೆ ಆ ತೀರ್ಮಾನದ ಮೇಲೆ ಸರ್ಕಾರ ತೀರ್ಮಾನವನ್ನು ಕೈಗೊಳ್ಳುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಇದರಲ್ಲಿ ರೂಲ್ಸ್ ಪ್ರಕಾರ ಈ ರೀತಿ ಇದೆ—

"4 Determination of water rates : (1) In respect of each crop or revenue year as the case may be, the Tahsildar shall, after sach enquiry as he deems fit and after satisfying himself that water was supplied, made available or used for the irrigation of any land, prepare a statement of water rates payable by each land-holder.

(2) After the preparation of the statement of water rates payable by each land holder under sub-rule (1) the Tahsildar shall issue a notice of demand to the person liable to pay the water rate...

"(3) Any person objecting to the levy of water rate as specified in the notice of demand served on him may within thirty days from the date of service of such notice appeal to the Assistant Commissioner who shall after giving the appellant an opportunity of being heard pass such orders on the appeal as he thinks fit.

Provided that the Assistant Commissioner may admit an appeal preferred after the period of thirty days if he is satisfied that the appellant had sufficient cause for not preferring the appeal within that period." ಎಂದು ಇವೆ. ರೈತರಿಂದ ಇಸವಿಯಿಂದ ವಾಟರ್ ರೇಟ್ ಡಿಮ್ಯಾಂಡ್ ನೋಟೀಸ್ ಕೊಟ್ಟು ಆ ಡಿಮ್ಯಾಂಡ್ ನೋಟೀಸಿಗೆ ಅಬ್ಜಕ್ಷನ್ ಫೈಲ್ ಮಾಡುತ್ತಾ ಬಂದಿದ್ದಾರೆ. ಸುಮಾರು ೩-೪ ಸಾವಿರ ಅರ್ಜಿಗಳನ್ನು ಆಕ್ಯುಮಿಲೇವ್ ಆಗಿವೆ. ಅವುಗಳನ್ನು ತೀರ್ಮಾನ ಮಾಡಿಲ್ಲ. ಸುಮಾರು ೩-೪ ಸಾವಿರ ಅರ್ಜಿಗಳು ಒಂದೊಂದು ಸಬ್‌ಡಿವಿಜನ್‌ನಲ್ಲಿ ಇವೆ. ಅವುಗಳನ್ನು ತೀರ್ಮಾನ ಮಾಡಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಅದನ್ನು ವಿಚಾರ ಮಾಡಲಿಲ್ಲ. ಆ ಅರ್ಜಿ ೧೯೭೫ರಲ್ಲಿ ಬಂದಿದೆ. ಯಾವ ಆಧಾರದ ಮೇಲೆ ಅದನ್ನು ವಿಚಾರ ಮಾಡುತ್ತೀರಾ ? ಬೆಳೆ ಬಂದಿದ್ದರೆ ವಾಟರ್ ರೇಟ್ ಹಾಕಬೇಕು. ಇಲ್ಲದಿದ್ದರೆ ಇಲ್ಲವೆಂದು ಹೇಳಿದರೆ ಹೇಗೆ ?

ಶ್ರೀ ಕೆ. ಎಚ್. ಹನುಮೇಗೌಡ.—೧೦ ಎಕರೆಯೊಳಗೆ ಒಳಪಡಬೇಕು. ಒಂದು ಸಾರಿ ಬೆಳೆ ಬರಬೇಕಾದರೆ ಐದಾರು ಸಾರಿ ನೀರು ತುಂಬಬೇಕು. ಬೆಳೆ ಹಾಕಿದ ಮೇಲೆ ಆಲ್ಲಿ ಒಂದು ಹದ ನೀರು ಇಲ್ಲದೇ ಹೋದರೆ ಬೆಳೆ ಹಾಳಾಗಿ ಹೋಗುತ್ತದೆ. ವಿಲೇಜ್ ಅಕೌಂಟೆಂಟ್ ಬೆಳೆ ಬಂದ ಕೂಡಲೇ ಪಹಣಿ ಬರೆಯುತ್ತಾನೆ. ಬೆಳೆಹೋಯಿತೆಂದು ಅಸಿಸ್ಟೆಂಟ್ ಕಮಿಷನರ್ ಅವರಿಗೆ ಹಾಗೂ ಡೆಪ್ಯುಟಿ ಕಮಿಷನರ್ ಅವರಿಗೆ ಒಂದು ಅರ್ಜಿ ಕೊಟ್ಟರೆ ಕಾನೂನು ಪ್ರಕಾರ ಇಬ್ಬರನ್ನೂ ಒಟ್ಟಿಗೆ ಸೇರಿಸುವುದಕ್ಕೆ ಸರ್ಕಾರ ಪ್ರಯತ್ನ ಮಾಡದೆ ಸೇರಿಸುವುದಕ್ಕಾಗಲಿಲ್ಲ ಬಹಳ ಕೆಲಸಗಳು ಇವೆಯೆಂದು ಹೇಳುತ್ತಾರೆ. ಇವರಿಂದ ಆಗಬಾರದ ಅನ್ಯಾಯ ಆಗುತ್ತದೆ.ಆದ್ದರಿಂದ ಅದಕ್ಕಾಗಿ ಒಂದು ಟೈಂ ನಿಗದಿಮಾಡಿ. ಸಂಬಂಧಪಟ್ಟ ರೈತರು ಅಪ್ಲಿಕೇಷನ್ ಕೊಟ್ಟರೆ ಅದನ್ನು ಮೂರು ತಿಂಗಳ ಮೇಲೆ ಇಟ್ಟುಕೊಳ್ಳಬಾರದು, ಇಬ್ಬರೂ ಎರಡು ವರ್ಷಗಳು, ಆದಮೇಲೆ ಮನೆ ಮಾರಿಕೊಂಡು ಅಧಿಕಾರಿಗಳ ಜೊತೆಯಲ್ಲಿ ಕ್ರಾಸ್ ಎಗ್ಜಾಮಿನೇಷನ್ನಿಗೆ ಹೋಗುತ್ತಾರೆ. ಒಂದೊಂದು ಸಾರಿ ರೇಗುತ್ತಾರೆಂದು ಹೇಳುತ್ತೇನೆ. ಈ ಸನ್ನಿವೇಶ ನೋಡಿದಾಗ ಅದು ಹಾಗೆಯೇ ಆಗುತ್ತದೆಂದು ಹೇಳಬಹುದು.

ಶ್ರೀ ಕಾಗೋಡು ತಿಮ್ಮಪ್ಪ —ಕೆರೆಗಳ ಕೆಳಗೆ ಅಚ್ಚುಕಟ್ಟು ಇರುತ್ತದೆ. ಬಾವಿ ಇಲ್ಲದೆ ಬೆಳೆ ಮಾಡಿರುವುದರಿಂದ ಅಲ್ಲಿ ಕೆರೆಯ ನೀರನ್ನು ಉಪಯೋಗಿಸುವುದಿಲ್ಲ. ಅಂಥಾದ್ದಕ್ಕೆ ವಾಟರ್ ರೇಟ್ ಹಾಕುತ್ತಾರೆ. ಇದರ ಬಗ್ಗೆ ಹೇಳಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಾನೂನಿಗೆ ವಿರೋಧವಾಗಿ ಮಾಡಿ ಎಂದು ನಾನು ಯಾರಿಗೂ ಯಾವ ಅಧಿಕಾರಿಗೂ ಹೇಳುವುದಕ್ಕಾಗುವುದಿಲ್ಲ. ಅವರು ಮಾಡುವುದಕ್ಕಾಗುವುದಿಲ್ಲ. ಕಾನೂನು ಪ್ರಕಾರ ಮಾಡಬೇಕು. ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ ಮೂರು ಇನ್‌ಗ್ರಿಡಿಯಂಟ್ಸ್ ಸೇರಿಸಿದರೂ ಕೂಡ ಬೆಳೆಯಾಗದೇ ಇರುವ ಸಂದರ್ಭವೂ ಉಂಟು ಈ ಮೂರೂ ಸಹ ಪರಿಪೂರ್ಣವಾಗಿದೆಯೆಂದು ಹೇಳುವುದಕ್ಕಾಗುವುದಿಲ್ಲ ಅಂತಹ ಸಂದರ್ಭದಲ್ಲಿ ಜನರಲ್ ಇನ್‌ಸ್ಪೆಕ್ಷನ್ ಮಾಡಿ ಎಂಬುದಾಗಿ ಹೇಳಿದರೆ ಅದರ ಪ್ರಕಾರ ಅವರು ಮಾಡಬೇಕು. ವಾಟರ್‌ರೇಟ್ ಹಾಕಿರುವುದು ತಪ್ಪು ಎಂಬುದಾಗಿ ಹೇಳುವುದು ಸರಿಯಲ್ಲ ಅಪೀಲುಗಳಿದ್ದರೆ ಅಂತಹ ಕೇಸುಗಳನ್ನು ಅವರು ತೀರ್ಮಾನಮಾಡಬಹುದು. ಈಗ ೯ ವರ್ಷಗಳಾಗಿವೆ ಅಂತಹ ಕೇಸುಗಳು ಜಾಸ್ತಿ ಇದ್ದರೆ ಒಬ್ಬ ವಿಶೇಷ ಅಧಿಕಾರಿಯನ್ನು ನೇಮಿಸಿ ಬೇಗ ಅಪೀಲು ಕೇಸುಗಳು ತೀರ್ಮಾನಮಾಡುವುದಕ್ಕೆ ವ್ಯವಸ್ಥೆಮಾಡುತ್ತೇನೆ.

Illegal allotment of Land at Shikaripur

ಶ್ರೀ ಕೆ. ಯಂಕಟಪ್ಪ.—ನಾನು ಈವೇ ತಾರೀಖಿನಲ್ಲಿ ಒಂದು ನೋಟೀಸ್ ಕೊಟ್ಟಿದ್ದೇನೆ. ಒಂದು ಲ್ಯಾಂಡ್ ದರಖಾಸ್ತಿನಲ್ಲಿ ಇಲ್ಲೀಗಲ್ ಆಗಿದೆ. ೩೦-೪-೧೯೭೪ರಲ್ಲಿ ಶಿಕಾರಿಪುರದಲ್ಲಿ ಆ ರೀತಿ ಜಮೀನು ಕೊಟ್ಟಿದ್ದಾರೆ. ಅದು ಸರಿಯಲ್ಲ. ನಾನು ಅದರ ಬಗ್ಗೆ ನೋಟೀಸ್ ಕೊಟ್ಟಿದ್ದೇನೆ: ಅದರ ಬಗ್ಗೆ ಮಂತ್ರಿಗಳು ಸ್ಟೇಟುಮೆಂಟು ಮಾಡಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದ್ದಕ್ಕಿದ್ದ ಹಾಗೆ ಇದೇನಾಯಿತು ಅದೇನಾಯಿತು ಎಂದು ಕೇಳಿದರೆ ನಾನು ಉತ್ತರ ಹೇಳುವುದಕ್ಕಾಗುವುದಿಲ್ಲ. ಅದೇನೆಂದು ತಿಳಿದು ಉತ್ತರವನ್ನು ಹೇಳಬೇಕಾಗುತ್ತದೆ.

ಶ್ರೀ ಕೆ. ಯಂಕಟಪ್ಪ —ನಾನು ಅದರ ಬಗ್ಗೆ ಪ್ರಶ್ನೆಯನ್ನೂ ಸಹ ಕೊಟ್ಟಿದ್ದೇನೆ. ನೋಟೀಸ್ ಕೊಟ್ಟಿದ್ದೇನೆ. ಸೆಕ್ರೆಟೇರಿಯಟ್ಟಿನವರು ನಿಮ್ಮ ಲೆಜಿಸ್ಲೇಚರ್ ಸೆಕ್ರೆಟೇರಿಯಟ್ಟಿಗೆ ತಿಳಿಸಿದ್ದಾರೆ. ಆದರೂ ಕೂಡ ಅರ್ಜಿ ಹಾಕಿದವರಿಗೇ. ಜಮೀನು ಇರುವವರಿಗೇನೇ ಜಮೀನು ಕೊಟ್ಟರೆ ಅದರ ಉದ್ದೇಶವೇನು?

ಅಧ್ಯಕ್ಷರು.—ಅವರ ಸೆಕ್ರೆಟೇರಿಯಟ್‌ನಿಂದ ನಮಗೆ ಕಾಗದ ಬಂದಿದೆ. ಅವರು ಇನ್ನೂ ಸ್ವಲ್ಪ ಹೆಚ್ಚು ಕಾಲ ಕೇಳಿದ್ದಾರೆ.

ಶ್ರೀ ಕೆ. ಯಂಕಟಪ್ಪ —ಟೈಂ ಕೇಳಿದ ಮೇಲೆ ಕೊಡಬೇಕು. ರೂಲ್ಸ್ ಪ್ರಕಾರ ಮಾಡಬೇಕಾಗುತ್ತದೆ ನಾನು ಅಸೆಂಬ್ಲಿ ಪ್ರಾರಂಭವಾಗುವುದಕ್ಕೆ ಮುಂಚೆ ಪ್ರಶ್ನೆ ಕೊಟ್ಟಿದ್ದೇನೆ. ಒಂದು ತಿಂಗಳ ಕಾಲ ಬೇಕೆಂದು ಕೇಳಿದ್ದಾರೆ. ಒಂದು ತಿಂಗಳಾದ ಮೇಲೆ ಇನ್ನೂ ಉತ್ತರ ಬರಲಿಲ್ಲ. ಮತ್ತೆ ವೇಳೆ ಬೇಕೆಂದು ಹೇಳಿದರೆ ಹೇಗೆ ? ೩೦-೬-೧೯೭೭ರಲ್ಲಿ ಲ್ಯಾಂಡ್ ಗ್ರಾಂಟ್ ಆಗಿರುವುದು ಇಲ್ಲೀಗಲ್ಲಾಗಿದೆ. ರೀಸೆಂಟಾಗಿ ೧೦ ವರ್ಷಗಳ ಮೇಲೆ ಅವರ ಮಕ್ಕಳಿಗೆ ಗ್ರಾಂಟ್ ಆಗಿದೆ. ದಯವಾಡಿ ಇದರ ವಿಷಯದಲ್ಲಿ ಕೂಡಲೇ ತೀರ್ಮಾನ ತೆಗೆದುಕೊಳ್ಳುವುದಕ್ಕಾಗುವುದಿಲ್ಲವೇ ?